ಕೊಡ್ಲಿ ತಗೊಂಡು ಮಲಕಾಜವ್ವನ ಮನೀ ಹೊಸಲಿ ಮುಂದ ನಿಂತಿದ್ದು ಒಪ್ಪತಕ್ಕದಲ್ಲ. ಅನುಚಾಣವಾಗಿ ನಡೆದ ಸಂಪ್ರದಾಯಕ್ಕ ವಿರುದ್ಧ ನೆಡ್ಕೊಂಡು ಮಂದೀಮನುಷ್ಯಾರನ ನೋಡ್ದ ಮುಟ್ಟೋದಲ್ದ, ಏನೂ ಅರೀಲಾರದ ಹುಡುಗೀಗೆ ತನ್ನ ಮನ್ಯನ ನೀರು ಕುಡಿಸಿದ ಪಡಿಯಾನ್ದಂತೂ ಕ್ಷಮಿಸಲಾರದ ತಪ್ಪು. ಹಿಂಗಾ ಮುಂದುವರೆದ್ರ ಊರಿಗೂರಾ ದಿವಾಳಿಯಾಗುತ್ತ. ಲೆಕ್ಕಕ್ಕ ಪಡಿಯಾನಿಗೆ ಸಾಯೂತನಕ ಊರೊಳಗ ಕಾಲಿಡಿಸಬಾರದು. ಗಂಡ ಸತ್ತ ಮಲಕಾಜವ್ವನ ನೋಡಿ ಐವತ್ತು ಸಾವಿರ ತಪ್ಪು ಕಾಣಿಕೆ ದೈವಕ್ಕ ಎಡ ವರ್ಷದೊಳಗ ನೀಡಿ ಊರೊಳಗ ಹೆಜ್ಜಿ ಇಡತಕ್ಕದ್ದು' ಎಂದು ದೈವದವರು ನಿರ್ಣಯ ಮಾಡಿದ್ರು.

ಅವ್ವನ ಒತಒತಿಗೆ ಪಡಿಯಾನೂ ಹಿರಿಯಾರ ಮಾತೊಪ್ಪಿ ಅಂದುಕೊಂಡಂಗ ಗೋವಾ ಕಡೆ ದುಡಿಯಾಕ ನಡದು, ಎರಡೊರ್ಷದ ಮ್ಯಾಲೆ ತಾಯಿ ಮಗ ಹೊಟ್ಟಿಬಟ್ಟಿ ಕಟ್ಟಿ ಕಷ್ಟಬಿದ್ದು ದುಡಿದು ದೈವದ ಮುಂದ ರೊಕ್ಕ ಇಟ್ಟರು. ಊರದೈವದ ಸಮ್ಮುಖದಾಗ ರೊಕ್ಕ ಬಸವಣ್ಣನ ಗಲ್ಲೇ ಪೆಟ್ಟಿಗೆ ಸೇರಿತು. ಬಂದದ್ದೆಲ್ಲ ಬರ್ಲಿ ಅನ್ಕೊಂಡ ತಾಯಿ ಮಗ ಪಾಳು ಬಿದ್ದ ಮನೆ ಸರಿಪಡಿಸಿಕೊಂಡು ದುಡಕೊಂತ ಹೊಂಟಿದ್ರು. ಪಡಿಯಾ ಊರುಸಾಬರಿ ಬಿಟ್ಟು ಮನೀ-ಕೆಲಸ ಹಿಡ್ದ ಕುಂತಾನಂತ ಅನ್ಕೊಂಡಿದ್ದ ಊರಮಂದೀಗೆ ಕಿವಿಗೆ ಬಿದ್ದ ಪಡಿಯಾನ ಮಾತುಗಳು ಮತ್ತಷ್ಟು ಕೆರಳಿಸಿದ್ದವು. ವಾಪಸ್ ಊರಿಗೆ ಬಂದಾಗ ಪಡಿಯಾ ಮೊದಲಿನಂತಿರಲಿಲ್ಲ. ಚುಟ್ಟಾ, ಸೆರೇ ಅಂಟುಕೊಂಡುಬಿಟ್ಟಿದ್ವು. ಎಷ್ಟರಮಟ್ಟಿಗೆ ಅಂದ್ರ ಊಟನೀರೂ ಏನೂ ಬ್ಯಾಡಾಗಿತ್ತು. ಬೆಳದ ಮಗನ ಕೈಯ್ಯಾಗಿಟ್ಕೊನ್ನಾಕ ಮಲಕಾಜವ್ವನೂ ಸೋತ್ಲು. ಆದ್ರ ಕೇರೆಯವರನ್ನ ಕಂಡ್ರ ತಾತ್ಸಾರ ಮಾಡೋ ಊರನ್ನವರ ಮ್ಯಾಗಿನ ಸಿಟ್ಟು ಆತನಿಗೆ ಕಡ್ಮಿಯಾಗಿರಲಿಲ್ಲ. ನಿಶೆದಾಗ ಹೆಚ್ಚೇ ಇರುತ್ತಿತ್ತು. ಹೀಗಾಗಿಯೇ ಗಾಯದ ಮೇಲೆ ಉಪ್ಪು ಸವರಿದಂತೆ ಎಮ್ಮೆಲೆ ಮಾತುಗಳು ಅವನ ಎದ್ಯಾಗ ಕುಟ್ಟಾಕಂತಿದ್ವು. ಇತ್ತ ಕಾದ ಕೆಬ್ಬನಾಗಿದ್ದ ರುದ್ರಗೌಡನಂತೂ ಪಡಿಯಾ ಊರಿಗೆ ಕಾಲಿಟ್ಟ ದಿನದಿಂದಲೂ ಬಿಟ್ಟಗಣ್ಣೀಲೆ ಕೆಕ್ಕರಿಸ್ಕೊಂಡು ನೋಡ್ಕೋತನಾ ಇದ್ದ.

ಸಾವ್ಕಾರ ರುದ್ರೇಗೌಡರ ತಮ್ಮ 'ಉರಿಗೌಡ'

